Karnataka Pawn Brokers (Amendment) Bill, 1979
Introduction

SRI V. M. KUSNOOR (Minister for Co-operation).—Sir, I beg to move :

"That leave be granted to introduce the Karnataka Pawn Brokers (Amendment) Bill, 1979."

MR. SPEAKER.—The question is :

"That leave be granted to introduce the Karnataka Pawn Brokers (Amendment) Bill, 1979."

The motion was adopted and leave was granted.

SRI V. M. KUSNOOR.—I introduce the Karnataka Pawn Brokers (Amendment) Bill, 1979.

MR. SPEAKER.—The Bill is introduced.**

Karnataka Command Areas Development Bill, 1979.

(Motion to Consider)

Debate Contd.

ಶ್ರೀ ಆರ್. ಅಂಬಣ್ಣ ನಾಯಕ್ ದೊರೈ (ಮಾನ್ವಿ).— ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಸಭೆಯ ಮುಂದೆ ತಂದಿರುವ ಕರ್ನಾಟಕ ಕಮ್ಯಾಂಡ್ ಏರಿಯಾಸ್ ಡೆವಲಪ್ಮೆಂಟ್ ಬಿಲ್ಲನ್ನು ಬೆಂಬಲಿಸಿ ಚರ್ಚೆಯಲ್ಲಿ ಭಾಗವಹಿಸುತ್ತಾ, ಕೆಲವು ಸಲಹೆಗಳನ್ನು ಕೊಡಲು ನಾನು ಇಚ್ಛಿಸುತ್ತೇನೆ. ದೇಶ ಸಂಪದ್ಭರಿತವಾಗಬೇಕಾದರೆ ಹಸಿರು ಕ್ರಾಂತಿ ಅತೀ ಅವಶ್ಯಕವಾದುದು. ಆ ಹಸಿರು ಕ್ರಾಂತಿ ಆಗಬೇಕಾದರೆ ಅದಕ್ಕೆ ಕಮ್ಯಾಂಡ್ ಏರಿಯಾ ಡೆವಲಪ್ಮೆಂಟ್ ಮಸೂದೆ ಒಂದು ವರಪ್ರಧಾನವಾಗಿದೆ. ಒಕ್ಕಲುತನ ಅಭಿವೃದ್ಧಿ ಹೊಂದಿ ರೈತ ಚೆನ್ನಾಗಿ ಬೆಳೆದು ಸಮೃದ್ಧನಾಗಬೇಕಾದರೆ ಈ ಕಮ್ಯಾಂಡ್ ಏರಿಯಾ ಮಸೂದೆಯಂತಹ ಬಹಳ ಪ್ರಯೋಜನಕಾರಿಯಾಗಿದೆ. ಬಡವರ ಹಾಗೂ ಮಾನವ ಸಂಕಟ ಪರಿಹಾರಕ್ಕಾಗಿ ನಮ್ಮ ಘನಸರ್ಕಾರವು ಹೊಂದಿರುವ ಉದ್ದೇಶಕ್ಕೆ ಮತ್ತು ಯೋಜನೆ ಸಫಲವಾಗಬೇಕಾದರೆ ಈ ಮಸೂದೆ ಕಾಯ್ದೆ ಹಾಕಿಕೊಂಡಿರುವ ಯೋಜನೆಯು ಪ್ರಕಾರವಾಗಿದೆ. ಈ ಪ್ರಾಧಿಕಾರದ ಯೋಜನೆಯಿಂದ ನೀರಿನ ಸರಿಯಾದ ಉಪಯೋಗವಾಗುತ್ತದೆ. ಅಲ್ಲದೆ ಒಂದು ಹನಿ ನೀರೂ ಕೂಡ ರಾಷ್ಟ್ರದ ಸಂಪತ್ತು ಎಂದು ಪರಿಗಣಿಸಲಾಗುತ್ತದೆ. ಈ ಪ್ರಾಧಿಕಾರದ ಅಚ್ಚುಕಟ್ಟು ಪ್ರದೇಶದಲ್ಲಿರತಕ್ಕ ರೈತ ಒಂದು ಹನಿ ನೀರನ್ನೂ ರಾಷ್ಟ್ರದ ಸಂಪತ್ತು ಎಂದು ತಿಳಿದುಕೊಳ್ಳಬೇಕು. ಭೂಮಿಯು ಅಭಿವೃದ್ಧಿಗಾಗಿ ಮತ್ತು ಒಕ್ಕಲುತನದ ಅಭಿವೃದ್ಧಿಗಾಗಿ ಆರಿಗೆ ಸರಿಯಾದ ತಿಳಿವಳಿಕೆಯನ್ನು ಕೊಡಲು ಪ್ರಾಧಿಕಾರವು ಅವಕಾಶ ಮಾಡಿಕೊಟ್ಟಿರೆ ಒಳ್ಳೆಯದು ಎಂದು ಹೇಳುತ್ತಾ, ಅದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈ ಯೋಜನೆಯಿಂದ ತುಂಗಭದ್ರಾ ಅಚ್ಚುಕಟ್ಟು ಪ್ರದೇಶ, ಮಲಪ್ರಭೆ ಮತ್ತು ಘಟಪ್ರಭಾ ಕಾಪೇರ್ ಬೇಸಿನ್ ಪ್ರಾಜೆಕ್ಟ್, (ಕೃಷ್ಣರಾಜಸಾಗರ, ಕಬಿನಿ, ಹೇಮಾವತಿ ಹಾಗೂ ಹಾರಂಗಿ) ಹಾಗೂ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಪ್ರದೇಶಗಳಿಗೆ ಪ್ರಯೋಜನವಾಗುತ್ತದೆ. ಸರ್ಕಾರ ವ್ಯವಸಾಯದ ಅಭಿವೃದ್ಧಿಗಾಗಿ ಯೋಜನೆಯಲ್ಲಿ ಹಣ ತೊಡಗಿಸುವ [illegible] ನ್ನು ಮುಂಚೆಗಿಂತಲೂ ಗಣನೀಯವಾಗಿ ಹೆಚ್ಚಿಸಿಕೊಂಡಿದ್ದು ಈ ಕಾರ್ಯಕ್ರಮವನ್ನು ಮುಂದುವರಿಸಿದೆ. ಅಚ್ಚುಕಟ್ಟು ಪ್ರದೇಶವನ್ನು ೮.೫೮ ಲಕ್ಷ ಹೆಕ್ಟೇರ್‌ಗಳಿಂದ ೨೦.೩೩ ಲಕ್ಷ ಹೆಕ್ಟೇರ್‌ವರೆಗೆ ವಿಸ್ತರಿಸಲಾಗಿದೆ.

**Bill appended as Annexure to this volume

೧೯೭೯ರ ಮಾರ್ಚಿವರೆಗೆ ಈ ಕಾರ್ಯಕ್ರಮದಲ್ಲಿ ೪೦೩ ಕೋಟಿ ರೂಪಾಯಿಯನ್ನು ತೊಡಗಿಸಲಾಗಿದೆ. ಕಮ್ಯಾಂಡ್ ಏರಿಯಾ ಡೆವಲಪ್ಮೆಂಟ್ ಯೋಜನೆಯಲ್ಲಿ ಭೂಮಿ ಸಮಪಾತಳಿ ಭೂ ಅಭಿವೃದ್ಧಿ ಮಾಡಿ ಭೂಮಿಯ ಗುಣಮಟ್ಟವನ್ನು ಹೆಚ್ಚಿಸಿ ನೀರಾವರಿ ಸೌಲಭ್ಯ ಒದಗಿಸಲು ಪ್ರಾಧಾನ್ಯ ಗಮನ ಕೊಡಲಾಗಿದೆ. ಇದರಿಂದ ರೈತನ ಒಂದು ಜೀವನದ ಮಟ್ಟ, ಮತ್ತು ಜೀವನಮಟ್ಟ ವಿಕಾಸ ವಾಗುತ್ತದೆ. ರೈತನಿಗೆ ವ್ಯವಸಾಯಕ್ಕೆ ಸೌಕರ್ಯ ಮಾಡಿಕೊಡುವ ದೃಷ್ಟಿಯಿಂದ ವ್ಯವಸಾಯ ಸಹಕಾರ ಸಂಘ ಹಾಗೂ ಬ್ಯಾಂಕುಗಳ ಮೂಲಕ ಸಾಲದ ಸೌಲಭ್ಯವನ್ನು ಪಡೆಯಲು ಅವಕಾಶ ಮಾಡಿಕೊಟ್ಟಿರುವುದರಿಂದ ರೈತನಿಗೆ ಬಹಳ ಅನುಕೂಲವಾಗಿದೆ. ಇದರಿಂದ ಸಮಯಕ್ಕೆ ಸರಿಯಾಗಿ ವ್ಯವಸಾಯ ರಂಗದಲ್ಲಿ ಬಂಡವಾಳ ಹೂಡಿ ಹೆಚ್ಚು ಉತ್ಪನ್ನವನ್ನು ಪಡೆಯುವುದಕ್ಕೆ ರೈತನಿಗೆ ಅವಕಾಶವಿದೆ. ಮತ್ತು ಕಮ್ಯಾಂಡ್ ಏರಿಯಾ ಅಭಿವೃದ್ಧಿ ಯೋಜನೆಯಲ್ಲಿ ರೇಷ್ಮೆ, ತೋಟಗಾರಿಕೆ, ಪಶುಸಂಗೋಪನೆ ಮುಂತಾದವುಗಳ ಅಭಿವೃದ್ಧಿಗೆ ಅವಕಾಶ ಮಾಡಿಕೊಡಲಾಗಿದೆ. ಆದ್ದರಿಂದ ಈ ವಂಸೂದೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ರೈತನು ಸಾಲವನ್ನು ಪಡೆಯುವಾಗ ಸರಿಯಾದ ಸಮಯಕ್ಕೆ ಸಾಲ ಪಾವತಿ ಮಾಡುವ ವ್ಯವಸ್ಥೆ ಇರಬೇಕು ಮತ್ತು ಯಾವ ರೈತ ಸಾಲ ಮರುಪಾವತಿ ಮಾಡುತ್ತಾನೋ ಆ ರೈತನಿಗೆ ಪುನಹ ಸಾಲ ವಿತರಣೆ ಮಾಡುವ ವ್ಯವಸ್ಥೆ ಇರಬೇಕು. ರೈತ ಬೆಳದಂಥ ಮಾಲನ್ನು ಮಾರುಕಟ್ಟೆಗೆ ಸಾಗಿಸಲು ಕೆಲವೊಂದು ಪ್ರದೇಶದಲ್ಲಿ ರೈತನಿಗೆ ಅನಾನುಕೂಲತೆ ಇದೆ. ಆದ್ದರಿಂದ ಮಾಲನ್ನು ಸಾಗಿಸಲು ಅನುಕೂಲವಾಗುವಂತೆ ರಸ್ತೆ ನಿರ್ಮಾಣ ಮಾಡುವ ಕಾರ್ಯಕ್ಕೆ ಪ್ರಧಾನ ಗಮನ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ನನ್ನ ಮತ ಕ್ಷೇತ್ರವಾದ ಮಾನ್ವಿ ತಾಲ್ಲೂಕಿನ ರಾಜಲದಿನ್ನಿ ಎಂಬ ಗ್ರಾಮದಲ್ಲಿ ರೈತರು ಬೆಳೆದ ಮಾಲನ್ನು ಮಾರುಕಟ್ಟೆಗೆ ಸಾಗಿಸಲು ತೊಂದರೆಯಾಗಿದೆ. ಏಕೆಂದರೆ ಆ ಗ್ರಾಮದ ಹತ್ತಿರದಲ್ಲಿ ನಿರುಪಯುಕ್ತವಾಗಿ ಹರಿಯುತ್ತಿರುವ ನೀರು ಸ್ಯಾಗ್‌ನೇಟ್ ಆಗಿ ರೈತರು ಅದನ್ನು ದಾಟಿ ಹೋಗುವುದಕ್ಕೆ ಅನಾನುಕೂಲ ಉಂಟಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಎಲ್ಲಿ ಅತ್ಯಂತ ಅವಶ್ಯಕತೆ ಇದೆಯೋ ಅಲ್ಲಿ ಕಾಸವೇಗಳನ್ನು ಕಟ್ಟಿಸಿಕೊಡಬೇಕು. ಆ ಮೂಲಕ ರೈತರು ತನ್ನ ಮಾಲನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗುವುದಕ್ಕೆ ಅನುವು ಮಾಡಿಕೊಡಬೇಕು. ರೈತನಿಗೆ ಸಾಲವನ್ನು ಕೊಡುವಾಗ ಕಡಿಮೆ ಪ್ರಮಾಣದ ಬಡ್ಡಿಯಲ್ಲಿ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಆ ಸಮಯದಲ್ಲಿ ಕೃಷಿ ಕಾರ್ಮಿಕರಿಗೆ, ಟಿನೆಂಟ್‌ದಾರರಿಗೆ ಹಾಗೂ ಪ್ರತ್ಯಕ್ಷ ಸಾಗುವಳಿದಾರರಿಗೂ ಇದರ ಉಪಯೋಗ ವಾಗುವಂತೆ ವ್ಯವಸ್ಥೆ ಮಾಡಬೇಕು. ಈ ಕ್ಷೇತ್ರದಲ್ಲಿ ಶೇಕಡ ೨೦ ಭಾಗ ಭೂ ಒಡೆತನ ಇಲ್ಲದೆ ಉಳುಮೆ ಮಾಡುತ್ತಿರುವ ರೈತರು ಇದ್ದಾರೆ, ಇಂಥ ರೈತರಿಗೆ ಕೆಲವೊಂದು ಸಹಕಾರ ಸಂಸ್ಥೆಗಳ ನಿಯಮಗಳು ಅಡ್ಡಿ ಬರಬಹುದು. ಭೂ ಒಡೆತನ ಇಲ್ಲದಂತಹವರಿಗೆ ಸಾಲವನ್ನು ಪಡೆಯುವಾಗ ಸ್ವಲ್ಪ ತೊಂದರೆಯಾಗಿದೆ. ಅದಕ್ಕಾಗಿ ಪಟ್ಟಾ ಇಲ್ಲದೆ ಇದ್ದರೂ ರೆಕಾರ್ಡ್ ಆಫ್ ರೈಟ್ಸ್ ಅಂದರೆ ಪಹಣಿ ಪತ್ರದ ಆಧಾರದ ಮೇಲೆ ಅವನಿಗೆ ಸಾಲವನ್ನು ಒದಗಿಸಿಕೊಡುವ ವ್ಯವಸ್ಥೆ ಮಾಡಬೇಕು.

(MR. CHAIRMAN Sri.H.T. Krishnappa) in the chair.

ಇನ್ನು ತುಂಗಭದ್ರಾ ಜಲಾಶಯದ ಅಚ್ಚುಕಟ್ಟು ಪ್ರದೇಶದಲ್ಲಿ ಕೆಲವು ತೊಂದರೆಗಳು ಇರುವುದನ್ನು ಈ ಸಭೆಯ ಮೂಲಕ ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ಏಕೆಂದರೆ ನಾನು ತುಂಗಭದ್ರಾ ಜಲಾಶಯದ ಅಚ್ಚುಕಟ್ಟು ಪ್ರದೇಶದಿಂದ ಬಂದಿರುವವನು. ಅಲ್ಲಿರತಕ್ಕಂಥ ಸಿಸ್ಟಂ ಆಫ್ ಇರಿಗೇಷನ್‌ನ ಪ್ಯಾಟ್ರನ್ ಬದಲಾವಣೆಯಾಗಬೇಕು. ಏಕೆಂದರೆ ಒಂದೇ ಜಮೀನಿನಲ್ಲಿ ಹೆವಿ ಇರಿಗೇಷನ್ ನಂತರ ಲೈಟ್ ಇರಿಗೇಷನ್ ಇದೆ. ಇದರಿಂದ ಮೇಲ್ಭಾಗದ ಜಮೀನಿಗೆ ಹೆವಿ ಇರಿಗೇಷನ್ ಎಂದು ನೀರನ್ನು ಒದಗಿಸಿದರೆ ಅದು ಕೆಳಭಾಗದಲ್ಲಿರುವ ಲೈಟ್ ಇರಿಗೇಷನ್ ಇರುವ ಜಮೀನಿಗೆ ಹಾನಿ ಉಂಟಾಗುತ್ತದೆ. ಇದರಿಂದ ಈ ಒಂದು ಸಿಸ್ಟಂ ಆಫ್ ಇರಿಗೇಷನ್ ಪ್ಯಾಟರ್ನ್ ಎನಿದೆ ಅದನ್ನು ಪೂರ್ಣ ಪರಿಶೀಲನೆ ಮಾಡಿ ಸರಿಯಾದ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳ ತ್ತೇನೆ. ತೊಂದರೆ ಆಗದ ರೀತಿಯಲ್ಲಿ ಬಿಗಿಯಾದ ಕ್ರಮವನ್ನು ಅನುಸರಿಸಬೇಕು. ರೈತರು ವೈಜ್ಞಾನಿಕವಾಗಿ ಆಧುನಿಕವಾದ ಕ್ರಮಗಳನು ಅನುಸರಿಸಬೇಕು. ಕೃಷಿ ಕಾರ್ಮಿಕರ ಸಲುವಾಗಿ ತರಬೇತಿಯನ್ನು ಕೊಡುವ ವ್ಯವಸ್ಥೆಯಾಗಬೇಕು. ತುಂಗಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ಸರದಿ ಪ್ರಕಾರ ನೀರನ್ನು ಕೊಡತಕ್ಕಂಥ ಅನುಕೂಲ ಇದೆ. ಒಂದು ಕಡೆ ನೀರನ್ನು ಬಂದ್ ಮಾಡಿದಾಗ ಮತ್ತೊಂದು ಕಡೆ ಇರುವ ಬತ್ತದ ಬೆಳೆಗೆ ತೊಂದರೆಯಾಗುತ್ತದೆ. ಇದರಿಂದ ಬಹಳ ಪರಿಣಾಮಕಾರಿಯಾದ ಹಾನಿಯುಂಟಾಗುತ್ತದೆ. ಆದ್ದರಿಂದ

ಇರತಕ್ಕಂಥ ಸರದಿ ಪ್ರಕಾರ ನೀರು ಬಿಡುವ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕು. ಇದರಿಂದ ನಮ್ಮ ಭಾಗದಲ್ಲಿ ಅಂದರೆ ಟೇಲ್ ಎಂಡ್‌ನಲ್ಲಿರತಕ್ಕಂಥ ರೈತರು ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಇದನ್ನು ನಿವಾರಿಸುವ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಈ ಸದನದ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಇನ್ನು ರೀಹ್ಯಾಬಿಲಿಟೇಷನ್ ಪುನರ್‌ವಸತಿ ವಿಚಾರವಲ್ಲಿ ಹೇಳುವುದಾದರೆ, ಕೆಲವು ಹಳ್ಳಿಗಳಲ್ಲಿ ಕಾರಣಾಂತರದಿಂದ ಕ್ಯಾಚ್‌ಮೆಂಟ್ ಏರಿಯಾದಲ್ಲಿ ನೀರು ಜಾಸ್ತಿ ಸೇರಿ ಅಲ್ಲಿರತಕ್ಕಂಥ ರೈತರಿಗೆ ಬಹಳ ತೊಂದರೆಯಾಗುತ್ತದೆ. ನಮ್ಮ ತಾಲ್ಲೂಕಿನಲ್ಲಿ ಕಪ್ಪಗಲ್ಲು ಎಂಬ ಗ್ರಾಮದಲ್ಲಿ ಮುಳುಗಡೆಯಾದ ಪ್ರದೇಶದ ಜನರಿಗೆ ಯಾವ ರೀತಿಯ ಪ್ರಗತಿಪರವಾದ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಅವರ ಜೀವನ ಮಟ್ಟವನ್ನು ಉತ್ತಮ ಪಡಿಸಬೇಕು. ಅವರಿಗೆ ವಾಸಕ್ಕೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಅವರಿಗೆ ಸೈಟುಗಳನ್ನು ಕೊಡಬೇಕು. ಮತ್ತು ಅವರ ಜೀವದ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಅನುಕೂಲವನ್ನು ಒದಗಿಸಿಕೊಡುವ ಕಡೆ ಸರ್ಕಾರ ಹೆಚ್ಚು ಗಮನವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಡೈರಿ ಡೆವಲಪ್‌ಮೆಂಟ್ ವಿಚಾರದಲ್ಲಿ ಹೇಳುವುದಾದರೆ ಈ ಒಂದು ಕಾರ್ಯಕ್ರಮ ನಮ್ಮಲ್ಲಿ ಯಶಸ್ವಿಯಾಗಿ ನಡೆಯುತ್ತಿದೆ. ಏಕೆಂದರೆ ನಮ್ಮ ಪ್ರದೇಶದಲ್ಲಿ ಹಸುಗಳಿಗೆ–ಎಮ್ಮೆಗಳಿಗೆ ಹಾಕತಕ್ಕಂಥ ಹಸಿರು ಹುಲ್ಲು ಸುಲಲಿತವಾಗಿ ದೊರೆಯುತ್ತದೆ. ಎಮ್ಮೆಗಳನ್ನು ಸಾಕುವುದರಲ್ಲಿ, ಹಸುಗಳನ್ನು ಸಾಕುವುದರಲ್ಲಿ ರೈತನನ್ನು ತನ ಆದಾಯವನ್ನು ಹೆಚ್ಚಿಸಿಕೊಳ್ಳುವುದಕ್ಕೆ, ತನ್ನ ಜೀವನದ ಮಟ್ಟವನ್ನು ವಿಕಾಸಗೊಳಿಸುವುದಕ್ಕೆ ಅನುಕೂಲವಾಗುತ್ತದೆ.

ಇನ್ನು ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಅಥಾರಿಟಿಗೆ ಚೇರ್ಮನ್‌ರವರನ್ನು ನಾಮಿನೇಟ್ ಮಾಡುವ ಅವಕಾಶ ಇದ್ದು, ಆ ಚೇರ್ಮನ್‌ರವರು ಅಫಿಸಿಯಲ್‌ವತಿಯಿಂದ ಇರಬೇಕೇ ಅಥವಾ ಜನರ ಪ್ರತಿನಿಧಿ ಇರಬೇಕೆ ಎಂಬುದನ್ನು ಸೂಚಿಸಿಲ್ಲ. ಜನರ ಪ್ರತಿನಿಧಿಯಾಗಿ ಚೇರ್ಮನ್ ಇರಲು ಅವಕಾಶ ಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಮತ್ತೆ ೫ ಜನ ಸದಸ್ಯರನ್ನು ಆಯಾ ಭಾಗದ ಶಾಸಕರನ್ನು ನಾಮಕರಣ ಮಾಡಬೇಕು. ಅದರಲ್ಲೂ ಹರಿಜನ-ಗಿರಿಜನರಿಗೆ ಕಡ್ಡಾಯವಾದ ಅವಕಾಶವನ್ನು ಮಾಡಿಕೊಡಬೇಕು. ಹರಿಜನ-ಗಿರಿಜನರ ಪ್ರತಿನಿಧಿ ಅಲ್ಲಿದ್ದರೆ ಅವರ ಜನಾಂಗದ ಉದ್ಧಾರದ ಬಗ್ಗೆ ವಿಚಾರ ಮಾಡಲು ಅನುಕೂಲವಾಗುತ್ತದೆ. ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಚ್. ಗಂಗಣ್ಣ ಭೀಮಪ್ಪ (ಕುಷ್ಟಗಿ):—ಸನ್ಮಾನ್ಯ ಅಧ್ಯಕ್ಷರೆ, ನಾನು ಕಮಾಂಡ್ ಏರಿಯಾ ಡೆವಲಪ್‌ಮೆಂಟ್ ಬಿಲ್ಲಿನ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ಕಾಂಪ್ರೊಶಿಸನ್ ಆಫ್ ದಿ ಅಥಾರಿಟಿರಲ್ಲಿ ಹೇಳಿರುವಂತೆ ಒಬ್ಬರು ಛೇರ್ಮನ್‌ರವನ್ನು ಸರ್ಕಾರ ನಾಮಕರಣ ಮಾಡಬೇಕೆಂದಿದೆ. ಆದರೆ ಆದರಲ್ಲಿ ಅಧಿಕಾರಿಗಳನ್ನು ಛೇರ್ಮನ್ ಆಗಿ ನಾಮಕರಣ ಮಾಡಬೇಕೇ ? ಅಥವಾ ಜನತಾ ಪ್ರತಿನಿಧಿಗಳನ್ನು ಛೇರ್ಮನ್‌ರಾಗಿ ನಾಮಕರಣ ಮಾಡಬೇಕೆಂಬುದನ್ನು ಸ್ಪಷ್ಟವಾಗಿ ಹೇಳಿಲ್ಲ. ಆದೇ ''ಬಿ'' ಯಲ್ಲಿ ೫ ಜನರನ್ನು ಸಣ್ಣ ರೈತರ ಪರವಾಗಿ ನಾಮಕರಣ ಮಾಡಬೇಕೆಂದು ಇದೆ. ಸಣ್ಣ ರೈತರು ಎಂದರೆ ಯಾರು ? ೫ ಎಕರೆಗಿಂತ ಕಡಿಮೆ ಇರುವವರೇ ? ಒಂದು ಗ್ರಾಮದಲ್ಲಿ ೧೦ ಎಕರೆ ಜಮೀನಿದ್ದು ಇನ್ನೊಂದು ಗ್ರಾಮದಲ್ಲಿ ಆತನಿಗೆ ೨೦ ಎಕರೆ ಇದ್ದರೆ ಆತನು ಸಣ್ಣ ರೈತರೆ? ಮತ್ತೆ ಆತನ ಹೆಸರಿನಲ್ಲಿ ಒಟ್ಟು ಜಮೀನು ೨ ಎಕರೆಯಿಂದ ೧೦ ಎಕರೆ ಜಮೀನು ಇರುವವರು ಸಣ್ಣ ರೈತರೆಂದು ನಿಗದಿ ಮಾಡಿದ್ದಾರೆಯೇ? ಈ ಬಗ್ಗೆ ದಯಮಾಡಿ ಸಂಬಂಧಪಟ್ಟಂತಹ ಮಂತ್ರಿಗಳು ಸ್ಪಷ್ಟೀಕರಣ ನೀಡಬೇಕು. ನಂತರ ೧೭ರಲ್ಲಿ ಪ್ರಿನ್ಸಿಪಲ್ಸ್ ಆಫ್ ಲೋಕಲೈಜೇಸನ್ ಸರದಿ ಪ್ರಕಾರ ನೀರು ಕೊಡುವಾಗ ಲೈಟ್ ಇರಿಗೇಷನ್ ಹಾಗೂ ಹೆವಿ ಇರಿಗೇಷನ್ ಎಂಬುದಾಗಿ ಎರಡು ಪಂಗಡಗಳನ್ನಾಗಿ ವಿಂಗಡಿಸಿವೆ, ಲೈಟ್ ಇರಿಗೇಷನ್‌ನಲ್ಲಿ ಯಾವ ಯಾವ ಬೆಳೆಗಳನ್ನು ತೆಗೆಯಬಹುದು? ಒಂದು ಜಮೀನಿನಲ್ಲಿ ಎಷ್ಟು ಹೈ ಬ್ರಿಡ್ ಜವಾರ್ ಹಾಗೂ ಹತ್ತಿ ಬೆಳೆಯಬಹುದೆಂದು ನಿಗದಿ ಮಾಡಿದ್ದಾರೆಯೇ? ಹತ್ತಿ ಬೆಳೆಯುವುದರಿಂದ ರೈತನಿಗೆ ಲಾಭವಾಗುತ್ತದೆ. ಇದನ್ನೇ ಬೆಳೆಯಬೇಕೆಂದು ಕಡ್ಡಾಯ ಮಾಡುವುದರಿಂದ ನಿಜವಾದ ರೈತನಿಗೆ ಇದರಿಂದ ಹಾನಿಯಾಗುತ್ತದೆ.

ಸೆಕ್ಷನ್ ೧೮ರಲ್ಲಿ "Classification of lands for raising different crops according to availbility of water" ಎಂದು ಹೇಳಿದ್ದಾರೆ.

SRI K. H. SRINIVAS.—I would like to draw the attention of the hon. Member to the Definition Clause wherein under Item No. 14, "small farmer" is defined. It says as follows:-

> "Small farmer" means a 'small holder" as defined in Clause (31) of Section 2 of the Karnataka Land Reforms Act, 1961."

ಶ್ರೀ ಹೆಚ್. ಗಂಗಣ್ಣ ಭೀಮಪ್ಪ-ಸೆಕ್ಷನ್ ೧೮ರಲ್ಲಿ 'Classification of lands for raising different crops according to availability of water' ಎಂದು ಇದೆ. ಈ ಬಗ್ಗೆ ಅನೇಕ ಮಂದಿ ಮಾನ್ಯ ಸದಸ್ಯರುಗಳು ವಿವರವಾಗಿ ಮಾತನಾಡಿದ್ದಾರೆ. ನನ್ನ ಕ್ಷೇತ್ರ ಆ ವಿಧಿಯಾಕ್ಕೆ ಸಂಬಂಧಿಸದಿದ್ದರೂ ಕೂಡ ಆ ಒಂದು ಕ್ಷೇತ್ರದಲ್ಲಿ ನನ್ನ ಜಮೀನು ಇದೆ. ನನ್ನ ಜಮೀನಿನಲ್ಲಿ ಕಬ್ಬು ಬೆಳೆಯುವುದಕ್ಕೆ ಎಷ್ಟು ನೀರು ಬೇಕೋ ಅಷ್ಟು ಸಿಗುತ್ತಿದೆ. ಆ ವಿಧಿಯಾದಲ್ಲಿರತಕ್ಕವರೆಲ್ಲರೂ ಕಬ್ಬು ಬೆಳೆದಿದ್ದಾರೆ; ಮತ್ತು ಕಡ್ಡಾಯವಾಗಿ ಕಬ್ಬನ್ನು ಬೆಳೆಯಬೇಕೆಂದು ಕೂಡ ಒತ್ತಾಯ ಮಾಡುತ್ತಿದ್ದಾರೆ. ಆದರೆ ಇನ್ನೊಂದು ಕಡೆ ಲೈಟ್ ಇರಿಗೇಷನ್ ಇದೆ; ಅಲ್ಲಿ ಪೆನಾಲ್ಟಿ ಕೊಟ್ಟು ಕಬ್ಬನ್ನು ಬೆಳೆಯುತ್ತಿದ್ದಾರೆ. ಆದ್ದರಿಂದ, ಅಲ್ಲಿ ಇನ್ನೂ ಏಕೆ ಲೋಕಲೈಸೇಷನ್ ಮಾಡಿಲಿಲ್ಲವೆಂದು ಕೇಳುತ್ತೇನೆ. ಮತ್ತೊಂದು ಕಡೆ ಲೈಟ್ ಇರಿಗೇಷನ್ ಇದೆ, ಅಲ್ಲಿ ವರಲಕ್ಷ್ಮಿ, ಹೈಬ್ರಿಡ್ ಬೆಳೆಯಬಹುದೆಂದು ಹೇಳುತ್ತಿದ್ದಾರೆ; ಆದರೆ ಅಲ್ಲಿ ಒಂದು ಹನಿ ನೀರೂ ಕೂಡ ಬರುತ್ತಿಲ್ಲ. ಆದರೂ ಕೂಡ ವೆಟರ್‌ಮೆಂಟ್ ಆಫೀಸರ್: ೧೫ ನೂರು ರೂಪಾಯಿ ವೆಟರ್‌ಮೆಂಟ್ ಟ್ಯಾಕ್ಸ್ ಹಾಕಿದ್ದಾರೆ. ಆದ್ದರಿಂದ ಅದನ್ನು ಅಷ್ಟಕ್ಕೇ ಬೇಕಾದರೆ ಖರೀದಿಗೆ ಕೊಡುತ್ತೇನೆಂದು ಹೇಳಿದ್ದೇನೆ. ಅಲ್ಲಿಗೆ ಬರತಕ್ಕ ವೆಟರ್‌ಮೆಂಟ್ ಆಫೀಸರ್ ಏನಾದರೂ ಕಾಂಟ್ರಿಬ್ಯೂಷನ್ ಕೊಟ್ಟರೆ ೫ ನೂರು ರೂಪಾಯಿ ಹಾಕುತ್ತಾನೆ, ಇಲ್ಲದಿದ್ದರೆ ೧೫ ನೂರನ್ನೇ ಹಾಕುತ್ತಾನೆ. ಇನ್ನು ನಾನೇನೋ ಎಂ.ಎಲ್.ಎ. ಆದುದಕ್ಕೆ ಅಸಿಸ್ಟೆಂಟ್ ಇಂಜಿನಿಯರ್‌ರವರು ನನ್ನ ಜಮೀನಿನಲ್ಲಿ ೬ ಇಂಚಿನ ಪೈಪು ಹಾಕಿಸಿದ್ದಾರೆ; ಇಲ್ಲದಿದ್ದರೆ ಹಾಕುತ್ತಿರಲಿಲ್ಲ. ಜನಸಾಮಾನ್ಯರಿಗೆ ಅಲ್ಲಿ ಹಾಕುವುದು ಕೇವಲ ೨ ಇಂಚಿನ ಪೈಪು.

ಛೇರ್ಮನ್‌ರವರು.— ಆ ಎಲ್ಲ ದೋಷಗಳನ್ನು ನಿವಾರಣೆ ಮಾಡುವ ಸಲುವಾಗಿಯೇ ಈ ವಸೂದೆಯನ್ನು ತಂದಿರುವುದು.

ಶ್ರೀ ಗಂಗಣ್ಣ ಭೀಮಪ್ಪ.—ಇನ್ನು ಪಿ.ಎಲ್.ಡಿ. ಬ್ಯಾಂಕ್, ಡಿ.ಸಿ.ಸಿ. ಬ್ಯಾಂಕ್, ಸೊಸೈಟೀಸ್, ನ್ಯಾಷನಲೈಸ್ಡ್ ಬ್ಯಾಂಕ್, ನಾನ್ ನ್ಯಾಷನಲೈಸ್ಡ್ ಬ್ಯಾಂಕ್ ಮುಂತೀನ ಸಾಲವನ್ನು ಪಡೆಯಂಬಹುದೆಂದು ಹೇಳಿದ್ದಾರೆ. ಯಾರೋ ಒಬ್ಬ ರೈತ ಯಾವುದೋ ಒಂದು ಬ್ಯಾಂಕಿನಿಂದ ಸಾಲ ಪಡೆಯುವಾಗ ಆ ಬ್ಯಾಂಕಿಗೆ ತನ್ನ ಆಸ್ತಿಯನ್ನು ಆಧಾರ ಮಾಡಿಕೊಟ್ಟಿರುತ್ತಾನೆ. ಪುನಃ ಅವನಿಗೆ ಹಣ ಬೇಕಾದಾಗ ಲಂಚ ಕೊಟ್ಟು ಆ ಬ್ಯಾಂಕಿನಿಂದ ನೋ ಡ್ಯೂ ಸರ್ಟಿಫಿಕೇಟನ್ನು ಪಡೆದು ಮತ್ತೊಂದರಲ್ಲಿ ಸಾಲವನ್ನು ತೆಗೆದುಕೊಳ್ಳುತ್ತಾನೆ. ಈ ರೀತಿ ಮಾಡುವವರ ವಿರುದ್ಧ ಅಂದರೆ ಯಾರು ಸರ್ಟಿಫಿಕೇಟನ್ನು ತೆಗೆದು ಕೊಂಡಿರುತ್ತಾರೆ ಮತ್ತು ಯಾರು ಕೊಟ್ಟಿರುತ್ತಾರೆ ಅವರಿಬ್ಬರಿಗೂ ಶಿಕ್ಷೆ ಮಾಡಬೇಕು.

ಛೇರ್ಮನ್‌ರವರು.—ಅದು ಇಂಡಿವಿಜುಯಲ್ ರೈಟ್ಸ್‌ಗೆ ಸಂಬಂಧಪಟ್ಟ ಹಾಗೆ ಅಲ್ಲ.

ಶ್ರೀ ಎಚ್. ಗಂಗಣ್ಣ ಭೀಮಪ್ಪ.—ಇನ್ನು ಸಣ್ಣ ರೈತರಿಗೆ ನೀರಾವರಿಗೋಸ್ಕರ ಸರ್ಕಾರದವರು ಏನು ಸಬ್ಸಿಡಿ ಕೊಡುತ್ತಾರೆ ಅದರಿಂದ ನಾವು ಏನು ಲಾಭ ಪಡೆಯುವುದಕ್ಕೆ ಸಾಧ್ಯವಾಗುತ್ತದೆ; ಕೊನೆಗೆ ಅದನ್ನು ವಾಪಸ್ಸು ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ, ಆದ್ದರಿಂದ ಸರ್ಕಾರ ಏನು ಒಂದು ಸಬ್ಸಿಡಿ ಕೊಡುತ್ತದೆ ಅಷ್ಟರಲ್ಲೇ ಮಾಡಿಕೊಳ್ಳುವುದಕ್ಕೆ ರೈತರಿಗೆ ಅವಕಾಶ ಮಾಡಿಕೊಟ್ಟರೆ ಅನುಕೂಲವಾಗುತ್ತದೆ. ಹಾರ್ಟಿಕಲ್ಚರ್‌ನವರು ಎತ್ತುಗಳು, ಎಮ್ಮೆಗಳು, ಕುರಿಗಳನ್ನು ತೆಗೆದುಕೊಳ್ಳಲು ಸಬ್ಸಿಡಿ ಕೊಡುತ್ತಿದ್ದಾರೆ. ಏಕೆಂದರೆ ಅದು ಇರಿಗೇಟೆಡ್ ಏರಿಯಾ ಆದ್ದರಿಂದ ಅಲ್ಲಿ ಡೇರಿ ಡೆವಲಪ್‌ಮೆಂಟ್ ಆಗಬಹುದು ಎಂದಂ. ಒಟ್ಟಿನಲ್ಲಿ ನಾನು ಹೇಳುವುದಾದರೆ, ಈ ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್

ಆಥಾರಿಟಿ ಎಂದು ಏನು ಮಾಡಿದ್ದೀರಿ ಅದಕ್ಕೆ ಒಬ್ಬರು ಅಧ್ಯಕ್ಷರು ಮತ್ತು ೧೨ ಮಂದಿ ಸದಸ್ಯರ ಪೈಕಿ ೫ ಮಂದಿ ನಾನ್ ಆಫೀಷಿಯಲ್ ಮೆಂಬರ್ಸ್ ಎಂದು ಹೇಳಿದ್ದೀರಿ. ಈ ಸಂದರ್ಭದಲ್ಲಿ, ನನ್ನ ಒಂದು ಸಲಹೆ ಏನೆಂದರೆ, ಆ ಏರಿಯಾಕ್ಕೆ ಸಂಬಂಧಿಸಿದ ಎಲ್ಲ ಕ್ಷೇತ್ರಗಳ ಶಾಸಕರುಗಳನ್ನು ಆ ಆಥಾರಿಟಿಯಲ್ಲಿ ತೆಗೆದುಕೊಳ್ಳಲು ಸಾಧ್ಯವಾಗದಿದ್ದರೂ ಕೊನೇ ಪಕ್ಷ ಇಬ್ಬರು ಮೂವರನ್ನಾದರೂ ತೆಗೆದುಕೊಂಡರೆ ಒಳ್ಳೆಯದಾಗುತ್ತದೆ. ಆ ರೀತಿ ಮಾಡದೆ ಆಫೀಷಿಯಲ್ಸೇ ಜಾಸ್ತಿಯಾಗಿ ಆವರು ಹೇಳಿದಂತೆ ನಾನ್ ಆಫೀಷಿಯಲ್ಸ್ ಕೇಳಬೇಕಾಗುತ್ತದೆ. ಕೇವಲ ೫ ಮಂದಿ ನಾನ್ ಆಫೀಷಿಯಲ್ಸ್‌ನಿಂದ ಏನು ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ. ಆದ್ದರಿಂದ, ೧೨ ಮಂದಿ ಸದಸ್ಯರುಗಳ ಪೈಕಿ ನಾನ್-ಆಫೀಷಿಯಲ್ ಮೆಂಬರ್ಸ್, ಜಾಸ್ತಿ ಇರುವಂತೆ ಮಾಡಿ, ಆ ಕ್ಷೇತ್ರಕ್ಕೆ ಸಂಬಂಧಿಸಿದ ವಿಧಾನಸಭಾ ಸದಸ್ಯರಿಗಾಗಲೀ, ಲೋಕಸಭಾ ಸದಸ್ಯರಿಗಾಗಲೀ ಅಥವಾ ರಾಜ್ಯಸಭಾ ಸದಸ್ಯರಿಗಾಗಲಿ ಅವಕಾಶ ಮಾಡಿಕೊಡಬೇಕೆಂದು ಹೇಳಬಯಸುತ್ತೇನೆ. ಆ ಆಥಾರಿಟಿಯ ಛೇರ್ಮನ್ನರೂ ಕೂಡ ನಾನ್ ಆಫೀಷಿಯಲ್ಲೇ ಆದರೆ ಉತ್ತಮ ಅನ್ನಿಸುತ್ತದೆ. ಏಕೆಂದರೆ ಅವರು ಅಡ್ಮಿನಿಸ್ಟ್ರೇಟೀವ್ ಮೆಂಬರ್-ಕಮ-ಸೆಕ್ರೆಟರಿ-ಕಮ-ಫೀಫ್ ಎಕ್ಸಿಕ್ಯೂಟೀವ್ ಆಫೀಸರ್ ಆಗಿರುತ್ತಾರೆ. ಅವರು ಈ ಮೂರು ಕಾರ್ಯಗಳನ್ನು ನಿರ್ವಹಣೆ ಮಾಡಬೇಕು. ತಾನೇ ಮೆಂಬರ್ ಆಗಿಯೂ ಕೆಲಸ ಮಾಡಬೇಕು, ಸಂಬಂಧಪಟ್ಟ ಎಲ್ಲ: ಖಾತೆಯ ಅಧಿಕಾರಿಗಳಿಗೂ ಡೈರೆಕ್ಷನ್ ಕೊಡಬೇಕು, ಮೀಟಿಂಗ್‌ಗಳನ್ನು ಕರೆಯಬೇಕು. ಆದ್ದರಿಂದ, ದಯವಿಟ್ಟು ಚೀಫ್ ಎಕ್ಸಿಕ್ಯೂಟೀವ್ ಆಫೀಸರ್ ಮತ್ತು ಅಡ್ಮಿನಿಸ್ಟ್ರೇಟರ್‌ಗಳ ಕೆಲಸಕ್ಕೆ ಬೇರೆ ಬೇರೆ ಅಧಿಕಾರಿಗಳನ್ನು ನೇಮಿಸಿದರೆ ಒಳ್ಳೆಯದಾಗುತ್ತದೆಂದು ನನಗನ್ನಿಸುತ್ತದೆ. ನಾವು ನಿರ್ದಿಷ್ಟವಾಗಿ ಈ ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಆಥಾರಿಟಿಯನ್ನು ಆಟಾನಮಸ್ ಬಾಡಿಯಾಗಿ ಮಾಡಿ ನಮ್ಮ ರಾಜ್ಯದಲ್ಲಿರಕ್ಕ ಳ ಪ್ರದೇಶಗಳನ್ನು ಏನು ಆಚ್ಚುಕಟ್ಟು ಪ್ರದೇಶ ಎಂದು ಮಾಡಲಾಗಿದೆ ಅದನ್ನು ಅಭಿವೃದ್ಧಿ ಮಾಡಲು ಸಾಧ್ಯವಾಗುತ್ತದೆಂದು ಹೇಳುತ್ತೇನೆ. ಒಟ್ಟಿನಲ್ಲಿ, ಒಂದು ಹನಿ ನೀರೂ ಪೋಲಾಗದಂತೆ ಉಪಯೋಗ ಮಾಡಿಕೊಳ್ಳುವ ಅವಕಾಶವನ್ನು ಈ ಒಂದು ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಆಥಾರಿಟಿಯವರು ಮಾಡಿಕೊಟ್ಟರೆ ಅದಕ್ಕೆ ರೈತರ ಪರವಾಗಿ ಸಾಗೂ ನನ್ನ ವೈಯಕ್ತಿಕವಾದ ಅನಂತ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇಷ್ಟು ಹೇಳಿ ಮಾತನಾಡಲು ಅವಕಾಶಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†SRI V. V. PATTAR (Jamkhandi).—Sir, some of my friends feel that there should be inclusion of agricultural labourers in Clause 3 of this Bill. The Hon. Minister Sri Srinivas asked for the reasons and I shall say why they should be included.

The first reason is that when we think of an industrial sphere, the new idea is to give the labourers of the industry participation in the management. The irrigated area is also on the same footing as an industry. In course of time the problem may arise as to how to tackle the landholder on the one side and the labourers on the other side. So, when this is also just an industry, the participation of agricultural labour is a must. From that view point the inclusion of agricultural labour is a must in this particular clause.

MR. CHAIRMAN.—Is it your desire to invite that trouble in the field of a agriculture also ?

SRI V. V. PATTAR.—Whether we like it or not, about 75 per cent of the persons we are having in this field are agricultural labourers. They are factors of production ; they are factors of development. When we are thinking of the development of the irrigated area, we cannot forget the labourers who are an important factor. Trouble will always be there because of the conflicting interests of lalour and landholders. It may be otherwise also.

MR. CHAIRMAN.—The hon. member may please understand the object of the Bill. It is with regard to improvement of command area and not with regard to other problems.

4-00 P.M.

SRI V. V. PATTAR.—I am coming to that. On page 8 of the Bill it is said :

> "all round development of the farmers in the area in respect of argiculture, sericulture, animal husbandry, fisheries, horticulture, forestry, communication and co-operation."

This is a vast subject to be dealt with. Even the agriculture labourer who can resort to any of these occupations comes in. From that view point I suggest inclusion of agriculture labourer is a must so far as the authority is concerned.

I am making another suggestion that in the irrigation area practically we are raising an assured crop. Sometimes what happens is, due to some reason or the other there is failure of crop. In order to secure to the farmers a fair deal I am suggesting a scheme for insurance of the crops. Insurance of crops is a method adopted by many advanced countries in the world. Here it not apply to dry lands where the yield is uncertain. But so far as irrigation area is concerned, we can expect an assured crop and if there is crop failure we must see that farmers are given a security. The farmers are investing certain amount for raising crop and if there is any failure the farmers must be given some security. They should not be made to suffer if there is failure of crops. So I suggest there should be insurance of crop.

The Bill is one of the revolutionary one that is introduced. Here the development work is not only the right of a particular person within the command area but it is also a liability. If a landholder says that he cannot develop or not willing to develop, then the authority is entitled to take back the land. It is a new idea. In socialistic pattern of societies what happens is certain rights are there but there are obligations also. Work is compulsory. In this Bill we find that there is a sort of obligation on the part of the person that he should develop the area and raise crops. So this is a revolutionary Act and I welcome it. I hope my suggestions will be considered.

†ಶ್ರೀ ಡಿ. ಟಿ. ರಾಮು (ಚನ್ನಪಟ್ಟಣ)—ಸನ್ಮಾನ್ಯ ಅಧ್ಯಕ್ಷರೇ, ಈ ಅಚ್ಚುಕಟ್ಟು ಪ್ರಾಧಿಕಾರ ಯೋಜನೆಯನ್ನು ಒಂದು ಕಾಯಿದೆ ರೂಪವಾಗಿ ಏನು ತಂದಿದ್ದಾರೆ. ಅದು ನಿಜವಾಗಿಯೂ ಸಹ ಸ್ವಾಗತಾರ್ಹವಾದುದು ಎಂದು ನಾನು ನನ್ನ ದೃಷ್ಟಿಯಿಂದ ಹೇಳುತ್ತೇನೆ. ಏತಕ್ಕೆಂದರೆ ರೈತ ಇದುವರೆಗೆ ಮಳೆಯ ಒಂದು ಜೂಜಾಟದಲ್ಲಿ ಬೆಳೆ ಬೆಳೆಯುತ್ತಿದ್ದ ಆಮೇಲೆ ಅಣೆಕಟ್ಟುಗಳು ನಿರ್ಮಾಣವಾದುವು.

ಈಗ ಈ ಮಳೆಯ ನೀರನ್ನು ಒಂದು ಕಡೆ ಶೇಖರಿಸಿ ಈ ರೀತಿ ಮಾಡುತ್ತಾ ಇರುವುದರಿಂದ ರೈತರಿಗೆ ಬಹಳ ಸದುಪಯೋಗವಾಗುತ್ತಾ ಇದೆ. ಇಂತಹ ಒಂದು ವಿಧಾನವನ್ನು ಈಗ ಏರ್ಪಡಿಸಿದ್ದಾರೆ. ಇದು ವರೆಗೂ ಕೂಡ ಈ ರೀತಿಯಾಗಿ ರೈತರ ಹಿತರಕ್ಷಣೆ ಮಾಡಬೇಕೆನ್ನುವುದನ್ನು ಗಮನದಲ್ಲಿಟ್ಟುಕೊಂಡಿರಲಿಲ್ಲ ಒಂದು ಕ್ರಮಬದ್ಧವಾದ ರೀತಿಯಲ್ಲಿ, ಒಂದು ವಿಧಿ ಬದ್ಧವಾದ ರೀತಿಯಲ್ಲಿ ರೈತರ ಅನುಕೂಲಕ್ಕಾಗಿ ಅವನ ಅಭಿವೃದ್ಧಿಗಾಗಿ ಇದುವರೆಗೂ ಕೂಡ ಯಾವುದೇ ಒಂದು ಕ್ರಾಂತಿಕಾರಕವಾದ ಕಾರ್ಯಕ್ರಮವನ್ನು ತೆಗೆದುಕೊಂಡಿರಲಿಲ್ಲ. ಆದರೆ ಇಪತ್ತಿನ ದಿವಸ ಈ ಒಂದು ಆಚ್ಚುಕಟ್ಟಿನ ಪ್ರದೇಶಕ್ಕೆ ಈ ಒಂದು ಪ್ರಾಧಿಕಾರ ಪ್ರಾಧಾನ್ಯತೆ ಕೊಟ್ಟಿದೆ. ಈ ಎಲ್ಲಾ ದೃಷ್ಟಿಯಿಂದಲೂ ಸಹ ಈ ಒಂದು ಕಾಯಿದೆ ಸ್ವಾಗತಾರ್ಹವಾದುದು ಎಂದು ಹೇಳುತ್ತೇನೆ. ಆದರೆಲ್ಲೂ ಕೂಡ ಈ ಸಣ್ಣ ಹಿಡುವಳಿದಾರರ ಒಂದು ಅಭಿವೃದ್ಧಿಯನ್ನು ನಾವು ಗಮನಕ್ಕೆ ತೆಗೆದುಕೊಂಡಾಗ ಇದು ಒಂದು ಕ್ರಾಂತಿಕಾರಕವಾದ ಹೆಜ್ಜೆ ಎಂದು ನನ್ನ ವೈಯಕ್ತಿಕ ಅಭಿಪ್ರಾಯವಾಗಿದೆ. ಏತಕ್ಕೆಂದರೆ ಈ ಪ್ರಾಧಿಕಾರದ ಅಧಿಕಾರವನ್ನು ನಾವು ನೆನೆಸಿಕೊಂಡು ಪ್ರಪ್ರಥಮವಾಗಿ ಕಾನೂನು ಬದ್ಧವಾಗಿ ಈ ಒಂದು ಕ್ರಮವನ್ನು ಅನುಸರಿಸಿರುವುದರಿಂದ ರೈತರಿಗೆ ಅನುಕೂಲವಾಗುತ್ತದೆ ಎಂದು ತಿಳಿಯುತ್ತೇನೆ. ಏತಕ್ಕೆಂದರೆ ಒಂದು ಆಣೆಕಟ್ಟು ಕಟ್ಟಿದಾಗ ಪ್ರಪ್ರಥಮವಾಗಿ ರೈತರ ಶೋಷಣೆಯಿಂದ ಪ್ರಾರಂಭವಾಗಿ ಬಡವರ ಶೋಷಣೆಯೂ ಪ್ರಾರಂಭವಾಗುತ್ತಿತ್ತು. ಹೇಗೆಂದರೆ ಆಲ್ಲಿ ಬಡವರ ಭೂಮಿ ಇರುವುದರಿಂದ ಶ್ರೀಮಂತರು ಏನು ಮಾಡುತ್ತಿದ್ದರು ಎಂದರೆ ಆ ಬಡವನ ಭೂಮಿಯಲ್ಲೇ ಕಾಲುವೆಯನ್ನು ತೆಗೆಯುತ್ತಿದ್ದರು. ಈಗ ಈ ಒಂದು ಪ್ರಾಧಿಕಾರದಿಂದ ಅವರ ಶೋಷಣೆ ಮುಕ್ತಾಯವಾದಂತಾಗುತ್ತದೆ. ಈ ಸಣ್ಣ ಹಿಡಂವಳಿದಾರರ ಹಿತಚಿಂತನೆ ಮಾಡತಕ್ಕಂಥಾ ಈ ಒಂದು ಕಾರ್ಯಕ್ರಮ ಏನು ಇದೆ ಮತ್ತು ಈ ಬಡವರನ್ನು ಶೋಷಣೆ ಮಾಡತಕ್ಕಂಥಾ ಈ ಒಂದು ಕಾರ್ಯಕ್ರಮ ಏನೂ ಇದೆ ಅದನ್ನು ಈ ಪ್ರಾಧಿಕಾರಿ ಹಂತದಲ್ಲಿ ರೂಪಿಸಬೇಕು. ಇದರಲ್ಲಿ ವ್ಯವಸಾಯಕ್ಕೆ ಪ್ರಾಧಾನ್ಯತೆ ಕೊಡಬೇಕು ಮತ್ತು ತೋಟಗಾರಿಕೆಗೆ ಪ್ರಾಧಾನ್ಯತೆ ಕೊಡಬೇಕು ಮತ್ತು ಪೈನುಗಾರಿಕೆಗೂ ಕೂಡ ಪ್ರಾಧಾನ್ಯತೆ ಕೊಡಬೇಕು. ಆದರಲ್ಲೂ ಕೂಡ ೧–೨ ಎಕರೆ ಇಟ್ಟುಕೊಂಡಿರುವ ಸಣ್ಣ ರೈತರ ಹಿತರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ಅವರ ಒಂದು ಅಭಿವೃದ್ಧಿಯನ್ನು ಮಾಡುವುದಕ್ಕೆ ಈ ಕ್ರಾಂತಿಕಾರಕವಾದ ಕಾರ್ಯಕ್ರಮ ಬಹಳ ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಏತಕ್ಕೆಂದರೆ ಒಬ್ಬ ಸಣ್ಣ ರೈತನಿಗೆ ಎರಡು ಎಕರೆ ಇದ್ದರೆ ಅದರಲ್ಲಿ ಒಂದು ಎಕರೆಯನ್ನು ತನ್ನ ಜೀವನಕ್ಕೆ ಇಟ್ಟುಕೊಂಡು ಇನ್ನೊಂದು ಎಕರೆಯಲ್ಲಿ ನೇಪಿಯರ್ ಗ್ರಾಸ್ ಆನ್ನು ಬೆಳೆದು ಅದರಿಂದ ಅವನು ೧೦–೧೨ ಹಸುಗಳನ್ನು ಸಾಕಿಕೊಂಡು ಪೈನುಗಾರಿಕೆ ಅಭಿವೃದ್ಧಿ ಮಾಡಿಕೊಳ್ಳಬಹುದು. ಒಂದು ವೇಳೆ ಅವನಿಗೆ ಪೈನುಗಾರಿಕೆಯಲ್ಲಿ ಆಸಕ್ತಿ ಇಲ್ಲದೇ ಹೋದರೆ ರೇಷ್ಮೆ ವ್ಯವಸಾಯವನ್ನು ಅವಲಂಬಿಸಬಹುದು ಇಲ್ಲವೇ ಕಬ್ಬನ್ನು ಬೆಳೆಯಬಹುದು. ಆ ರೀತಿ ಬೆಳೆಯುವುದಕ್ಕೆ ಆ ರೈತನಿಗೆ ಸರಿಯಾದ ಸಾಲ ಸೌಲಭ್ಯಗಳು ಮತ್ತು ಸಬ್ಸಿಡಿ ಪಗೈರೆ ಮತ್ತು ವ್ಯವಸಾಯಕ್ಕೆ ಬೇಕಾದಂಥಾ ಸಲಕರಣೆ ಉಪಕರಣಗಳು ಇದನ್ನು ಪ್ರಾಧಿಕಾರದವರು ಕೊಡಿಸಿಕೊಡಬೇಕು. ಈ ಬಗ್ಗೆ ಅವು ತನ್ನದೇ ಆದಂಥಾ ಒಂದು ರೂಪ ರೇಖೆಯನ್ನು ಇಟ್ಟುಕೊಳ್ಳಬೇಕು ಎಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಇನ್ನು ಈ ಪ್ರಾಧಿಕಾರದಲ್ಲಿ ೫ ಜನ ಸದಸ್ಯರು ಇರುತ್ತಾರೆ ಎಂದು ಹೇಳುತ್ತಾರೆ. ಈ ಬಗ್ಗೆ ನನ್ನ ಮಾನ್ಯ ಮಿತ್ರರು ಕೆಲವು ಸಲಹೆಗಳನ್ನು ಮಾಡಿದ್ದಾರೆ. ಏನೆಂದರೆ ಇದಕ್ಕೆ ಒಬ್ಬರು ಹರಿಜನ ಸದಸ್ಯರು ಇರಬೇಕು ಎಂದು. ಇದಕ್ಕೆ ಮಾನ್ಯ ಸಚಿವರು ಆಗಲೇ ಉತ್ತರ ಕೊಟ್ಟಿದ್ದಾರೆ. ಅದಕ್ಕೆ ನಾನು ಹೇಳುವುದೇನೆಂದರೆ ಇದಕ್ಕೆ ಒಬ್ಬರು ಹರಿಜನರು ಮತ್ತು ಆಯಾಯ ಪ್ರದೇಶದ ಶಾಸಕರು ಒಬ್ಬರು ಮತ್ತು ಸಣ್ಣ ರೈತರ ಒಬ್ಬರು ಪ್ರತಿನಿಧಿ ಇರಲೇಬೇಕು ಎಂದು ಹೇಳುತ್ತೇನೆ. ಹಾಗೆ ಇದ್ದರೆ ಈ ಒಂದು ಪ್ರಾಧಿಕಾರ ಪರಿಣಾಮಕಾರಕವಾದ ರೀತಿಯಲ್ಲಿ ಮತ್ತು ಒಂದು ಕ್ರಾಂತಿಕಾರಕವಾದ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಶಕ್ತವಾಗುತ್ತದೆ ಎಂದು ನನ್ನ ಒಂದು ಅಭಿಪ್ರಾಯ.

ಆದಕಾರಣ ಈ ಒಂದು ಪ್ರದೇಶದಲ್ಲಿ ರಸ್ತೆಗಳು ನಿರ್ಮಾಣವಾಗಬೇಕು. ಮಾನ್ಯ ಮಂತ್ರಿಗಳು ಆಚ್ಚುಕಟ್ಟು ಪ್ರದೇಶಗಳ ರಸ್ತೆಗಳನ್ನು ನೋಡಿರಬಹುದು. ರೈತರು ಗದ್ದೆಗಳಿಗೆ ಗೊಬ್ಬರವನ್ನು ಸಾಗಿಸುವುದು ಕಷ್ಟವಾಗುತ್ತದೆ. ಬೆಳೆದಂಥ ಉತ್ಪನ್ನವನ್ನು ಸಾಗಿಸುವುದು ಕಷ್ಟವಾಗುತ್ತದೆ. ಆದ್ದರಿಂದ ರಸ್ತೆಗಳ ನಿರ್ಮಾಣದ ಕೆಲಸ ಅಗತ್ಯವಾಗಿ ಆಗಬೇಕು. ಇದಲ್ಲದೆ ಮಣ್ಣಿನ ಪರೀಕ್ಷಾ ಕೇಂದ್ರಗಳು ಇರಬೇಕು. ಪ್ರತಿಯೊಬ್ಬ ರೈತನ ಹೊಲಕ್ಕೆ ಪರೀಕ್ಷಾಲಯದ ಅಧಿಕಾರಿಗಳು ಭೇಟಿ ಕೊಟ್ಟು ಮಣ್ಣನ್ನು ಪರೀಕ್ಷಿಸಿ, ಪರಿಶೀಲನೆಗನುಗುಣವಾಗಿ ಬೆಳೆಯನ್ನು ಇಷ್ಟುಪಂತೆ ರೈತರಿಗೆ ಸಲಹೆ ಮಾಡಬೇಕು. ಈ ಮೆಲಾ

ಕೆಲಸಗಳನ್ನು ಈ ಪ್ರಾಧಿಕಾರ ಮಾಡಿದರೆ ರೈತರಿಗೆ ಒಳ್ಳೆಯ ಕಾರ್ಯ ಮಾಡಿದಂತಾಗುತ್ತದೆ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಎಲ್ಲ ಕಾರ್ಯಗಳನ್ನು ನಿಯೋಜಿಸಿದಾಗ ಈ ಒಂದು ಪ್ರಾಧಿಕಾರ ರೈತರಿಗೆ ಕಾಮಧೇನುವಾಗುತ್ತದೆ ಎಂದು ಹೇಳಿ ಇದನ್ನು ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಏ. ವೀರಪ್ಪ ಮೊಯಿಲಿ (ಕಾರ್ಕಳ).—ಮಾನ್ಯ ಅಧ್ಯಕ್ಷರೇ, ಈ ಸಭೆಯು ಮುಂದೆ ಇರತಕ್ಕಂಥ ಮಸೂದೆ ಒಂದು ಐತಿಹಾಸಿಕವಾದ ಮಸೂದೆ ಎಂದು ನನಗನ್ನಿಸುತ್ತದೆ. ಏಕೆಂದರೆ, ಈ ಮಸೂದೆಯ ಮುಖಾಂತರ ಕಮಾಂಡ್ ಏರಿಯಾ ಪ್ರದೇಶದಲ್ಲಿ ಮಹತ್ತರವಾದ ಆರ್ಥಿಕ ಸಾಮಾಜಿಕವಾದ ಬದಲಾವಣೆಯನ್ನು ಮಾಡಲಿಕ್ಕೆ ಸಹಕಾರಿಯಾಗಿದೆ. ನಾವು ನಮ್ಮ ದೇಶವ ಮೂಲಭೂತವಾಗಿ ಸಂಪದ್ಭರಿತವಾದ ದೇಶವಾಗಿದ್ದರೂ ಕೂಡ ಜನ ಮಾತ್ರ ದರಿದ್ರರು. ಬಡ ಜನರು ಜಾಸ್ತಿಯಾಗಿದ್ದಾರೆ ಎಂದು ಇತಿಹಾಸವನ್ನು ಓದುವಾಗಲೂ ಹೇಳುತ್ತಿದ್ದೇವೆ. ಇತಿಹಾಸ ಹೋಗಿ ಈಗ ನಾವು ವರ್ತಮಾನ ಕಾಲದಲ್ಲಿ ಚಿಂತನೆ ಮಾಡುವಾಗಲೂ ಕೂಡ ದೇಶದ ಪರಿಸ್ಥಿತಿ ಇದೇ ರೀತಿ ಇದ್ದುದು ಕಾಣುತ್ತದೆ. ಈ ದೇಶದಲ್ಲಿ ಭೌಗೋಳಿಕವಾಗಿ ಯಾವರೀತಿಯಲ್ಲಿ ಏರು, ತಗ್ಗುಗಳು ಪರ್ವತಗಳು ಜಾಸ್ತಿಯಾಗಿ ಕಾಣಿಸುತ್ತವೆಯೋ ಅದೇ ರೀತಿಯಲ್ಲಿ ಸಮಾನತೆಯ ರೀತಿಯಲ್ಲಿಯೂ ಸಮಾಜದಲ್ಲಿಯೂ ಕೂಡ ಜನರಲ್ಲಿಯು ಏರು ತಗ್ಗುಗಳು, ಕಷ್ಟ ಸಂಕಷ್ಟಗಳನ್ನು ನಾವು ಕಾಣುತ್ತಿದ್ದೇವೆ. ಭೌಗೋಳಿಕವಾಗಿಎಲ್ಲಾ ಕಡೆಗೂ ಕೂಡ ಒಂದೇ ತರಹದ ಬದಲಾವಣೆಯನ್ನು ತರಲಿಕ್ಕೆ ನಾವು ಆಸಕ್ತರಾಗಿದ್ದರೂ ಕೂಡ ಸಮಾಜದ ಏರುಪೇರುಗಳ ಕಾರಣದಿಂದ ಒಂದು ದೇಶದ ಒಂದು ಕಡೆಯಲ್ಲಿ ಬದಲಾವಣೆಯ ಸೂತ್ರವನ್ನು ಕಂಡಿದ್ದರೂ ಕೂಡ ಇಡೀ ಸಮಾಜದಲ್ಲಿ ಇದರ ಫಲಿತಾಂಶವನ್ನು ಕಾಣುವುದು ಅಸಾಧ್ಯವಾಗಿದೆ. ಈ ದೃಷ್ಟಿಯಿಂದ ನಾವು ದೇಶವನ್ನು ಬದಲಾವಣೆ ಮಾಡಬೇಕಾದರೆ ಬೇರೆ ಬೇರೆ ರೀತಿಯಲ್ಲಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಲ್ಲದೆ, ಒಂದು ರಾಷ್ಟ್ರೀಯ ನೀತಿಯನ್ನು ಅನುಷ್ಠಾನ ಮಾಡಿ ದೇಶವನ್ನು ಬದಲಾವಣೆ ಮಾಡುತ್ತೇವೆ ಅಥವಾ ಸಮಾಜವನ್ನು ಬದಲಾವಣೆ ಮಾಡುತ್ತೇನೆ ಎಂದು ಹೋದರೆ ಅದು ಈ ದೇಶದಲ್ಲಿ ನಡೆಯುವುದಿಲ್ಲ ಈ ಪ್ರಯೋಗ ಆಯೆಶಸ್ಸು ಆದದ್ದನ್ನು ನಾವು ಕಂಡಿದ್ದೇವೆ. ಆದರೂ ಸಹ ಇಂಥ ಕಾರ್ಯಕ್ರಮಗಳನ್ನು ನಾವು ಮಾಡಿದಾಗ ಸಮಾಜದಲ್ಲಿರತಕ್ಕ ಜನರಿಗೆ ಅವು ಮುಟ್ಟಲಿಕ್ಕೆ ಸಾಧ್ಯವಾಗುವುದಿಲ್ಲ. ಹಾಗೆಯೇ, ನಮ್ಮ ಮಾನ್ಯ ದೇವರಾಜ ಅರಸ್ ಅವರು ಕರ್ನಾಟಕದ ಮುಖ್ಯ ಮಂತ್ರಿಗಳಾದ ಮೇಲೆ, ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನ ಮಂತ್ರಿಗಳಾದ ಮೇಲೆ ಒಂದು ಹೊಸ ರೀತಿಯ ಸ್ವರೂಪವನ್ನು ಆರ್ಥಿಕ ಸಾಮಾಜಿಕ ರಂಗದಲ್ಲಿ ಕೊಡಲಿಕ್ಕೆ ಪ್ರಯತ್ನ ಮಾಡಿದ ಮೇಲೂ ಒಂದು ರೀತಿಯ ಕಪ್ಪು ಛಾಯೆ ಉಂಟಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಹಿಂದುಳಿದವರನ್ನು, ಹಿಂದುಳಿದ ಪ್ರದೇಶಗಳನ್ನು ಗುರುತಿಸಿ, ಪ್ರತ್ಯೇಕಿಸಿ, ಅಭಿವೃದ್ಧಿ ಕಾರ್ಯಕ್ರಮಗಳನ್ನು ಅಲ್ಲಿ ಪ್ರಯೋಗ ಮಾಡಿ ತನ್ಮೂಲಕ ದೇಶದಲ್ಲಿ ಆರ್ಥಿಕ ಸಾಮಾಜಿಕ ಸ್ವರೂಪವನ್ನು ಬದಲಾವಣೆ ಮಾಡತಕ್ಕಂಥ ಕೆಲಸವನ್ನು ಕೈಗೊಂಡಿದ್ದಾರೆ. ಇದನ್ನೇ ನಾವು ಆಂಗ್ಲ ಭಾಷೆಯಲ್ಲಿ 'ಪೈಲಟ್ ಪ್ಲಾನಿಂಗ್' ಎಂದು ಹೇಳುತ್ತೇವೆ. ಈ ಒಂದು ಪ್ರಯೋಗ ನಮ್ಮ ದೇಶದಲ್ಲಿ ಯಶಸ್ವಿಯಾಗಿ ಆಗಬೇಕಾಗಿದೆ ಎಂದು ನನಗನ್ನಿಸುತ್ತದೆ. ಈ ದೃಷ್ಟಿಯಿಂದ ನಾವು ಈ ಮಸೂದೆಯನ್ನು ನೋಡಿದಾಗ ಇದು ನಮ್ಮ ದೇಶದ ಇತಿಹಾಸದಲ್ಲಿಯೇ ಒಂದು ಮೈಲಿಗಲ್ಲು ಎಂದು ಹೇಳುವುದಕ್ಕೆ ನನಗೆ ಹೆಮ್ಮೆಯಾಗುತ್ತದೆ.

ದೇಶದಲ್ಲಿ ಬೇರೆ ಬೇರೆ ನೀರಾವರಿ ಯೋಜನೆಗಳನ್ನು ತೆಗೆದುಕೊಂಡಾಗ ಆ ಪ್ರದೇಶದಲ್ಲಿ ವಾಸ ಮಾಡತಕ್ಕ ಅನೇಕ ಜನರನ್ನು ನಾವು ಏವಿಕ್ಟ್ ಮಾಡಬೇಕಾಗಿ ಬರುತ್ತದೆ. ಅವರನ್ನು ಎವಿಕ್ಟ ಮಾಡಿದ ನಂತರ ಅವರಿಗೆ ಸಾಕಷ್ಟು ಪರಿಹಾರಧನವನ್ನೂ ಕೊಡುತ್ತೇವೆ. ಪರಿಹಾರಧನವನ್ನು ಕೊಟ್ಟು ಮೇಲೆ ನಮ್ಮ ಸರ್ಕಾರದವರು ತಿಳಿದುಕೊಳ್ಳುತ್ತಾರೆ ನಮ್ಮ ಜವಾಬ್ದಾರಿ ಆಯಿತು ಎಂದು. ಕೆಲವು ಸಂದರ್ಭದಲ್ಲಿ ಆ ಪ್ರದೇಶದಲ್ಲಿ ಜಾಗ ಏನಾದರೂ ಇದ್ದರೆ. ಪರಿಹಾರಧನಕ್ಕೆ ಬದಲಾಗಿ ಆ ಜಾಗವನ್ನು ಕೊಟ್ಟು ಸರ್ಕಾರದ ಜವಾಬ್ದಾರಿ ಆಯಿತು ಎಂದು ತಿಳಿದುಕೊಳ್ಳುತ್ತೇವೆ. ಈ ವಿಷಯದ ಬಗ್ಗೆ ನಾವು ಸರ್ವೆ ಮಾಡಿದರೆ ಆ ಪ್ರದೇಶದಲ್ಲಿದ್ದ ಜನರಿಗೆ ಶೇಕಡ ೮೦ರಷ್ಟು ಪಾಲು ನಾವು ಅನ್ಯಾಯ ಮಾಡಿದ್ದೇವೆ ಎನ್ನುವುದನ್ನು ನಮ್ಮ ಅನುಭವದಿಂದ ಕಂಡಿರುತ್ತೇವೆ ಈ ಪ್ರಶ್ನೆಯ ಕೂಡ ಪ್ರಮುಖವಾದುದು ಈ ಮಸೂದೆಯ ಬಗ್ಗೆ ನಾವು ಚರ್ಚೆ ಮಾಡುವಾಗ ಈ ವಿಷಯವನ್ನು ನಾವು ಗಮನಕ್ಕೆ ತೆಗೆದುಕೊಳ್ಳಬೇಕು. ಆದರೆ ಯಾವುದೋ ಒಂದು ಒತ್ತಡದಿಂದ ಈ ಪ್ರಶ್ನೆಯನ್ನು ತೆಗೆದುಕೊಳ್ಳಲಿಲ್ಲ ಎಂದು

ಕಾಣುತ್ತದೆ. That is the first and primary fault of the entire problem. ಆ ಜನರಿಗೆ ನಮ್ಮ ಹೃದಯದಲ್ಲಿ ಪ್ರಥಮ ಸ್ಥಾನ ಕೊಡಬೇಕು. ಆದರೆ ನಾವು ಪರಿಹಾರ ಧನ ಕೊಟ್ಟು ಆ ಪ್ರದೇಶದಿಂದ ಕಳುಹಿಸುತ್ತೇವೆ. ಈ ಮಸೂದೆಯಲ್ಲಿ The concept is excellent.

SRI K. H. SRINIVASA.—The concept of rehabilitation is not within the purview of this Act ; provided some expropriated ryots also have been rehabilated in the Commond Area, certainly they will get the benefit of this. But the proposition of the hon member will lead us to accept that all those people who come to be expropriated on acconut of haviug undertaken irrigation projects should be rehabilatated in the Command area itself.

ಶ್ರೀ ಎಂ. ವೀರಪ್ಪ ಮೊಯಿಲಿ.– ತಾವು ಹೇಳುವುದು ಎಲ್ಲಾ ಸರಿಯಲ್ಲ. ಆದರೆ ಇದರೆ ಒಂದು ಪ್ರಾಮುಖ್ಯವಾದ ಸಮಸ್ಯೆ. ತಾವು ನನ್ನ ಎಲ್ಲಾ ವಾದವನ್ನು ಪೂರ್ತಿಯಾಗಿ ಕೇಳಿದ್ದೀ ಒಪ್ಪಿಕೆಳುತ್ತಿದ್ದಿರೇನೋ. ನೀವು ಈ ಜನರಿಗೆ ಪರಿಹಾರದ ಹಣವನ್ನು ಕೊಟ್ಟಾಗ they are also potentially viabre to create wealth. ಈ ಒಂದು ಪ್ರಶ್ನೆಯನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕು. They are potentially viable section of society who may be responsible for creating wealth. ಆದರೆ ಆ ಒಂದು ಶಕ್ತಿಯನ್ನು ಹಣದ ಸಂಪತ್ತನ್ನು ತಾವು ಕೊಡುವುದೂ ಮಾತ್ರವಲ್ಲ. ಅದನ್ನು ಕೊಟ್ಟ ಮೇಲೆ, ಅದನ್ನು ಅವರ, ಯಾವ ರೀತಿ ಅದನ್ನು ಬಳಸಬೇಕೆಂಬ ಬಗ್ಗೆ ತಾವು ಮಾರ್ಗದರ್ಶನ ನೀಡಬೇಕಾಗುತ್ತದೆ. ಏಕೆಂದರೆ. ಅವರು ಹಣ ಪಡೆದ ಮೇಲೆ, ಆ ಹಣದಿಂದ ಏನಾದರೂ ವ್ಯವಹಾರ ಮಾಡಬೇಕೆಂಬ ಉತ್ಸುಕತೆ ಅವರಲ್ಲಿ ಇರುತ್ತದೆ ತಾವು ಕೊಟ್ಟ ಬಂಡವಾಳವನ್ನು ಉಪಯೋಗಿಸಿಕೊಂಡು ಹೆಚ್ಚು ಸಾಹಸ ಮಾಡಿ. ಹೆಚ್ಚು ಮಾಡುವುದರ ಮೂಲಕ ಈ ದೇಶದ ಸಂಪತ್ತನ್ನು ಹೆಚ್ಚು ಮಾಡಬೇಕೆಂಬ ಸಂಬಲವಿರುತ್ತದೆ. ಅಂತಹ ಸಂದರ್ಭದಲ್ಲಿ ಅವರಿಗೆ ಸರಿಯಾದ ಮಾಹಿತಿಯನ್ನು, ಸರಿಯಾದ ಮಾರ್ಗವನ್ನು ತಾವು ಅವರಿಗೆ ಸೂಚಿಸಬೇಕಾಗುತ್ತದೆ. ಇಲ್ಲದಿದ್ದರೆ ಅವರಿಗೆವ್ಯಯಕ್ಕಿಕವಾಗಿ ಪ್ರಯೋಜನವಾಗುವುದಿಲ್ಲ. ಆದಕಾರಣ ತಾವು ಸರಿಯಾದ ದಾರಿಯನ್ನು ತೋರಿಸಬೇಕಾಗುತ್ತದೆ. ಇದಕ್ಕೆ ನನ್ನ ಸಲಹೆ ಏನೆಂದರೆ, ಈ ಜನರಿಗೆ ಕಮ್ಯಾಂಡ್ ಏರಿಯಾದಲ್ಲಿ ಎಷ್ಟು ಸಾಧ್ಯವೋ ಅಷ್ಟು ಜಾಗವನ್ನು ಕೊಡಿ, ಸ್ಥಳ ಕೊಡುವುದಕ್ಕೆ ಸಾಧ್ಯವಾಗದಿದ್ದರೆ, ಯಾವುದಾದರೂ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಅನುಕೂಲ ಮಾಡಿಕೊಡಿ ಆಗ ತಾವು ಕೊಟ್ಟ ಪರಿಹಾರದ ಹಣವನ್ನು ಅವರು ಸದ್ವಿನಿಯೋಗ ಮಾಡುವುದಕ್ಕೆ ಅವಕಾಶವಾಗುತ್ತದೆ. ಇದರಿಂದ ಅವರು ಆ ಪ್ರದೇಶದ ಅಭಿವೃದ್ಧಿಯಲ್ಲಿ ಸಕ್ರೀಯ ಪಾತ್ರವಹಿಸುವುದಕ್ಕೆ ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ತಾವು ಇದನ್ನು ಪರಿಶೀಲನೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಯಾರಾದರೂ ನೀರಾವರಿ ಯೋಜನೆಗಳ ಕಾರಣದಿಂದಾಗಿ ತಮ್ಮ ಭೂಮಿಯನ್ನು ಕಳೆದುಕೊಂಡರೆ, ಅಂತಹವರಿಗೆ ಸರ್ಕಾರದಿಂದ ಪರಿಹಾರವನ್ನು ಕೊಡುತ್ತೇವೆ. ಬೇರೆ ಕಡೆಗಳಲ್ಲಿ ಭೂಮಿಯನ್ನು ಕೊಡುತ್ತೇವೆ. ಅಲ್ಲದೆ ಇನ್ನಿತರ ಸೌಲಭ್ಯಗಳನ್ನು ಪುನರ್ವಸತಿಯ ಅಂಗವಾಗಿ ಕೊಡುತ್ತಿದ್ದೇವೆ. ಯಾವೇ ಆಗಲಿ, ಆಚ್ಚುಕಟ್ಟು ಪ್ರದೇಶದಲ್ಲಿ ಬಂದು ಪುನರ್ವಸತಿ ಕೋಡಾಗ ಅಭಿವೃದ್ಧಿ ಪ್ರಾಧಿಕಾರದ ಮೂಲಕ ಅವರಿಗೆ ಎಲ್ಲ ಸೌಲಭ್ಯಗಳನ್ನು ಕಲ್ಪಿಸಿಕೊಡುವುದಕ್ಕೆ ಪ್ರಯತ್ನಮಾಡುತ್ತೇವೆ ಆದರೆ ಯಾರು ಈ ನೀರಾವರಿ ಯೋಜನೆಗಳ ಸಲುವಾಗಿ ತಮ್ಮ ಆಸ್ತಿ ಹಾಗೂ ಮನೆಗಳನ್ನು ಕಳೆದುಕೊಳ್ಳುತಾರೆ, ಅಂತಹವರಿಗೆ ನಾವು ಪರಿಹಾರ ಕೊಟ್ಟಮೇಲೆ, ಅವರಿಗೆ ನಾವು ಇಂಥಾದ್ದನ್ನೇ ಮಾಡಬೇಕೆಂದು ಹೇಳತಕ್ಕಂಥ ಒಂದು ಅಧಿಕಾರವನ್ನು ನಾವು ಈ ಮೂಲಕ ಪಡೆದು ಕೊಳ್ಳುವುದಕ್ಕೆ ಸಾಧ್ಯವಿಲ್ಲ ಏಕೆಂದರೆ, ಯಾರು ತಮ್ಮ ಆಸ್ತಿ ಹಾಗೂ ಮನೆ ಕಳೆದುಕೊಳ್ಳುತ್ತಾರೋ, ಅಂತಹವರು ಕೂಡಲೇ ಇನ್ನೆಲ್ಲಿಯೋ ಹೋಗಿ ನೆಲೆಸುತ್ತಾರೆ. ಇವರು ನಾವು ಆಚ್ಚುಕಟ್ಟನ್ನು ತಯಾರು ಮಾಡಿ ಜಮೀನನ್ನು ಕೊಡುವವರೆಗೆ ಕಾಯುವುದಿಲ್ಲ, ಆದಕಾರಣ ಸದಸ್ಯರು ಹೇಳಿರುವ ಪ್ರಶ್ನೆ ಗಂಭೀರವಾಗಿದೆ. ಈ ಪುನರ್ವಸತಿಯ ಪ್ರಶ್ನೆಗೂ ಮತ್ತು ಈ ವಿಧೇಯಕಕ್ಕೂ ಮಾನ್ಯ ಸದಸ್ಯರು ಯಾವ ರೀತಿ ನೇರ ಪಾಗಿ ಸಂಬಂಧ ಕಲ್ಪಿಸುತ್ತಾರೆಂಬುದು ನನಗೆ ಅರ್ಥವಾಗಲಿಲ್ಲ. ಈ ಬಗ್ಗೆ ಅವರು ಸ್ವಲ್ಪ ವಿವರಣೆಕೊಟ್ಟರ ಒಳ್ಳೆಯದು.

ಶ್ರೀ ಎಂ. ವೀರಪ್ಪಮೊಯಿಲಿ.—ಈ ಕಮ್ಯಾಂಡ್ ಏರಿಯಾ ಅಥಾರಿಟಿಯವರು ಯಾವುದೇ ಒಂದು ಯೋಜನೆಯನ್ನು ಕೈಗೂಳ್ಳುವುಕ್ಕಾಗಿ. ಅಲ್ಲಿರತಕ್ಕಂಥ ಜನರನ್ನು ಅಲ್ಲಿಂದ ಬೇರೆ ಕಡೆಗೆ ಕಳುಹಿಸ ವುದಕ್ಕೆ ಪ್ರಯತ್ನ ಮಾಡುತ್ತಾರೆ from that date it can commence. The authority can be constituted ; you need not wait for the ultimate finalisation of the entire project. ಬಹುಶಃ ಇದರಿಂದ ಹೆಚ್ಚಿನ ಒಂದು ಕಾರ್ಯಕ್ರಮ ವನ್ನು ಈ ಆಥಾರಿಟಿಯು ಮುಖಾಂತರ ಮಾಡುವುದಕ್ಕೆ ಸಾಧ್ಯವಿದೆ. ಇದನ್ನು ತಾವು ದೀರ್ಘವಾಗಿ ಆಲೋಚನೆ ಮಾಡಬೇಕು. ಇದು ಬಹಳ ಪ್ರಾಮುಖ್ಯವಾದಂಥ ಪ್ರಶ್ನೆಯಾಗಿದೆ. ನೀವು ಯಾವ ದೃಷ್ಟಿಕೋನದಿಂದ ಈ ಮಸೂದೆಯನ್ನು ತಯಾರುಮಾಡಿದ್ದೀರಿ, ಆ ಒಂದು ದೃಷ್ಟಿಕೋಣದಿಂದ ಈ ಪ್ರಶ್ನೆ ಹೊರತಾಗಿರಬಹುದು. ಆದರೆ ಇದನ್ನು ಆದರ ಒಂದು ಕಕ್ಷೆಯೊಳಗೆ ತೆಗೆದುಕೊಂಡಾಗ ಮಾತ್ರ, ಈಗ ತಾವು ಯಾವ ಒಂದು ಉದ್ದೇಶವನ್ನು ಇಟ್ಟುಕೊಂಡು ಈ ಮಸೂದೆಯನ್ನು ತಯಾರಿ ಮಾಡಿದ್ದೀರೋ, ಆ ಉದ್ದೇಶ ಸಂಪೂರ್ಣವಾಗುತ್ತದೆ ಇಲ್ಲದಿದ್ದರೆ ಅಸಂಪೂರ್ಣವಾಗುತ್ತದೆಂದು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಚೇರ್‌ಮನ್.—ಜನರನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಒಕ್ಕಲೆಬ್ಬಿಸಿದಾಗ ಅವರಿಗೆ ಸರ್ಕಾರದಿಂದ ಏನು ಪರಿಹಾರವನ್ನು ಕೊಡಲಾಗುತ್ತದೆ, ಆ ಪರಿಹಾರದ ಹಣವನ್ನು ಇಂತಹ ಕಡೆ ಯಲ್ಲಿಯೇ ವಿನಿಯೋಗ ಮಾಡಬೇಕೆಂದು ಅವರಿಗೆ ಕಡ್ಡಾಯ ಮಾಡುವುದಕ್ಕೆ ಆಗುತ್ತದೆಯೇ ಎಂದು ಮಾನ್ಯ ಮಂತ್ರಿಗಳು ತಮ್ಮನ್ನು ಕೇಳುತ್ತಿರುವುದು ?

ಶ್ರೀ ಎಂ.ವೀರಪ್ಪಮೊಯಿಲಿ.—ಇಲ್ಲಿ ಕಡ್ಡಾಯ ಮಾಡುವ ಪ್ರಶ್ನೆಯೇ ಬರುವುದಿಲ್ಲ. ಈ ಒಂದು ಪ್ರಶ್ನೆಯನ್ನು ಈ ಮಸೂದೆಯ ಕಕ್ಷೆಯಲ್ಲಿ ತೆಗೆದುಕೊಂಡಾಗ, ಆ ಜನರಿಗೆ ಹೆಚ್ಚು ಪ್ರಯೋಜನ ವಾಗುವುದಿದ್ದರೆ, ಈ ಆಥಾರಿಟಿಯ ಕೆಳಗೆ ಬರಲಿ ಎಂದು ನಾನು ಹೇಳುತ್ತಿರುವುದು.

SRI K. H. SRINIVAS.—That is what exactly I menat. Who ever that ought to be treated as beneficiaries under the provision of this Command Area Development Bill, It cannot be done unilaterally. The other party must also avail of the benefit and for the expropriate raiyat to avail the conefit under the authority, he should first choose to go and settle down in that area, that we cannot compel. That is all what I want to say.

SRI M. VEERAPPA MOILY.—Of course it cannot be extended but this is an ancilary thing. Of course it is part and parcel of the entire project when it is taken in a broad view. This is not a functional body at all. ಆದ್ದರಿಂದ ಈ ಒಂದು ಕಕ್ಷೆಯ ಕೆಳಗೆ ಈ ಯೋಜನೆಯನ್ನು ರೂಪಿಸಿದ್ದೇ ಆದರೆ, ಜನರಿಗೆ ಹೆಚ್ಚಿನ ಪ್ರಯೋಜನವಾಗುತ್ತದೆ. ಆಗ ಈ ಒಂದು ಕಕ್ಷೆಯ ಕೆಳಗೆ ಆ ವ್ಯಕ್ತಿಗಳೇ ಬಂದೇ ಬರುತ್ತಾರೆ.

ಇನ್ನು ಕ್ಲಾಸ್ ಳರಲ್ಲಿ Composition of the Authority ಬಗ್ಗೆ ಹೇಳಿದೆ ಈ ಅಥಾರಿ ಟಿಯ ಕೆಳಗೆ ಬರತಕ್ಕಂಥ ಸದಸ್ಯರುಗಳ ಪೈಕಿ ಈ ಕೆಳಕಂಡ ಅಧಿಕಾರಿಗಳು ಸಹ ಇದ್ದಾರೆ:

The Additional Secretary to Government, Planning Department (Commond Area Development),
The Director of Agriculture,
The Chief Engineers of the concerned irrigation project,
The Registrar of Co-operetive Societies,
The Director of Town Planning,
The Commissioner and Secretary to Government, Finance Deqartment,

The Chancellor of the University Cultural Science,
The Deputy Commissioners of the concerned revenue districts,
The Adminsistrator shall be the member-secretary of the Authority.

ಈ ಮಸೂದೆಯನ್ನು ನಾನು ಪ್ರಥಮದಲ್ಲಿ ನೋಡಿದಾಗ this may be one authority for all the projects ಎಂದು ನಾನು ತಿಳಿದುಕೊಂಡಿದ್ದೆ. ಬಹುಶಃ ಡ್ರಾಫ್ಟ್ ಮಾಡುವಾಗ there may be an isolation of the of thoughts by the draftsman of the Bill ಅಂದರೆ ಒಂದು ಛಾಪ್ಟರನ್ನು ಮಾಡಿ ಮುಗಿಸಿದ ಮೇಲೆ ಎರಡನೇ ಛಾಪ್ಟರನ್ನು ತಯಾರು ಮಾಡುವುದಕ್ಕೆ ಹೊರಟಾಗ, ಮೊದಲಿನ ಛಾಪ್ಟರಿನ ಉದ್ದೇಶ ಏನಿದೆ ಎಂಬುದು ಮರೆತು ಹೋಗುತ್ತದೆ. Some time it will happen. ಅದೇ ತರಹ ಈ ಮಸೂದೆ ತಯಾರಾಗಿದೆ ಎನ್ನುತಕ್ಕಂತಹ ಸಂಶಯ ನನಗೆ ಬಂದಿದೆ, ಇಲ್ಲದಿದ್ದರೆ ಆಡಳಿತಾತ್ಮಕವಾಗಿ ಈ ಸಂಸ್ಥೆಯ ಮೂಲಕ ಕೆಲಸಗಳನ್ನು ಅಷ್ಟು ಶೀಘ್ರವಾಗಿ ಮಾಡುವುದಕ್ಕೆ ಸಾಧ್ಯವಿಲ್ಲ. At least if you put nominees on these authorities, I could have appreciated it. ಈಗ ನಮ್ಮ ರಾಜ್ಯದಲ್ಲಿ ೧೨-೧೫ ಪ್ರಾಜೆಕ್ಟ್‌ಗಳ ಕೆಲಸಗಳನ್ನು ತೆಗೆದುಕೊಂಡರೆ, ಎಲ್ಲ ಕಡೆಗಳಲ್ಲಿಯೂ ಇವರೇ ಇರುತ್ತಾರೆ. ಎಲ್ಲ ಕಡೆಗಳಲ್ಲಿಯೂ ಇವರೇ ಇದ್ದರೆ, ಎಲ್ಲ ಪ್ರಾಜೆಕ್ಟ್‌ಗಳ ಕೆಲಸವನ್ನು ಜಾಗ್ರತೇ ಮಾಡಿ ಮುಗಿಸಬೇಕು, ಅವುಗಳನ್ನು ಜಾಗ್ರತೇ ಇಂಪ್ರೂವ್ ಮಾಡಬೇಕೆಂಬ ಉತ್ಸುಕತೆ, ಆ ಒಂದು ಮನೋಭಾವ ಈ ಸದಸ್ಯರಿಗೆ ಬರುವುದಕ್ಕೆ ಸಾಧ್ಯವಿಲ್ಲ. ಇದೂ ಕೂಡ ಒಂದು ರೂಟೀನ್ ಆಡಳಿತ ಕಾರ್ಯಕ್ರಮ ಆಗುವಂತಹ ಒಂದು ಸಂದರ್ಭ ಇದರಿಂದ ಬರಬಹುದು ಎಂಬ ಶಂಕೆ ಇದೆ.

4-30 P.M.

SRI K. H. SRINIVAS.—Under provision of clause 9- Sub-Clause 3: it is said :

> "(3) If any member, being an officer of State Government is unable to attend any meeting of the Authority he may under intimation to the Chairman authorise his immediate subordinate officer to do so..."

That is only the delegated authority.

ಶ್ರೀ ಎಂ. ವೀರಪ್ಪ ಮೊಯಿಲಿ.—ಡೆಲಿಗೇಟ್ಸ್ ಎಷ್ಟು ಮುಖ್ಯವೋ ಅಧಿಕಾರಿಗಳೂ ಅಷ್ಟೇ ಮುಖ್ಯ ಎಂದು ಹೇಳುತ್ತೇನೆ. ಅಂತಹದ್ದನ್ನು ಮಾಡುವಂತಹ ಪ್ರಮೇಯ ಬೀಳುತ್ತದೆ. ಆದನ್ನು ಮಾಡದೇಹೋದರೆ ಯಾರು ಆವರನ್ನು ಡೆಪ್ಯೂಟೈಸ್ ಮಾಡುತ್ತಾರೆ.

SRI K. H. SRINIVAS.—We had considered in detail. Now we want the immediate subordinate officer to deputise for the officer who will certainly take a decision of his own without waiting for instructions from the superior.

ಶ್ರೀ ಎಂ. ವೀರಪ್ಪ ಮೊಯಿಲಿ.—ಬಹುಶಃ ಕ್ಲಾಸ್ ೧ರಲ್ಲಿ ಹೇಳಿರುವಂತೆ ಯಾವುದೇ ಅಧಿಕಾರಿಗಳು ಅಥವಾ ಸದಸ್ಯರು ಆ ಸಭೆಗೆ ಬರುವುದಕ್ಕೆ ಆಗದಿದ್ದಲ್ಲಿ ಬೇರೆ ಯಾರಾದರನ್ನಾದರೂ ಕಳುಹಿಸಬಹುದು ಆದರೆ ನೀವು ಮಾಡುವಂತಹ ಈ ಅಫಾರಿಟಿಗೆ ಅದು ಸಾಧ್ಯವಿಲ್ಲ, unless the Director of Town Planning of the nominee ಕಾನೂನು ಪ್ರಕಾರ ಈ ಸಭೆಗೆ ಆವರೇ ಹಾಜರಾಗುವಾಗ ಈ ಸಭೆಯಲ್ಲಿ ಸರಿಯಾದ ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ವದಾ ಸಾಧ್ಯವಿಲ್ಲವೆಂದು ಹೇಳತಕ್ಕದ್ದು ಬಹುಶಃ ಇದುಪರೆಗೂ ಆಗಿಲ್ಲ. ಆದುದರಿಂದ either he or his nominee' ಎಂದಿದೆ ಆದರೆ ನನಗನ್ನಿಸುತ್ತದೆ ಆ ಒಂದು ನಿರ್ಣಯ ತೆಗೆದುಕೊಳ್ಳುವ ಬದಲು ಫೈನಲ್ಲಾಗಿ ಯಾವ ಅಧಿಕಾರಿಯನ್ನೂ ಆ ಕಾರ್ಯಕ್ರಮಕ್ಕೆ ನಿಯೋಜಿಸುತ್ತಾರೆಯೋ ಅವರನ್ನೇ ಸದಸ್ಯ

ರನ್ನಾಗಿ ಮಾಡಿದರೆ ಅವರು ಅದರಲ್ಲಿ ಹೆಚ್ಚು ಸಕ್ರಿಯವಾಗಿ ಭಾಗವಹಿಸುವುದು ಮಂತ್ರಿ that will be more practical and more beneficiai ಎಂಬುದನ್ನು ಬಹುಶಃ ತಾವು ಗಮನಿಸಬೇಕಂ. ಆದ್ದರಿಂದ ಯಾವಾಗ ಒಂದು ಕಮ್ಯಾಂಡ್ ಏರಿಯಾ ಅಥಾರಿಟಿ ಎಂದು ನೀವುಕ ಮಾಡುತ್ತಾರೆ ಆಗ ಆ ಒಂದಂ ವಿಶಿಷ್ಟವಾದ ಕಮ್ಯಾಂಡ್ ಏರಿಯಾ ಅಥಾರಿಟಿಯಿಂದ ಹೆಚ್ಚು ಫಲಿತಾಂಶವನ್ನು ಹೆಚ್ಚು ಕಾರ್ಯಕ್ರಮಗಳನ್ನು ನಾವು ನಿರೀಕ್ಷಿಸಬಹುದೆಂದು ನನಗನಿಸುತ್ತದೆ. ಆದುದರಿಂದ ತಾವು ಈ ಕಾರ್ಯಕ್ರಮ ಹೆಚ್ಚು ಸಫಲವಾಗಬೇಕಾದರೆ ನಿಯೋಜಿತ ಅಧಿಕಾರಿಗಳಿಗೆ ಹೆಚ್ಚು ಫ್ಲೆಕ್ಸಿ ಬಲಿಟಿ ಮತ್ತು ಅಧಿಕಾರವನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಾವು ಇದನ್ನು ಸೆಲೆಕ್ಟ್ ಕಮೀಟಿಗೆ ಕಳುಹಿಸಿದರೆ ಇನ್ನೂ ಪ್ರಾಮುಖ್ಯವಾದ ಕೆಲಸಗಳಾಗುತ್ತವೆ. ನಾನು ಹೇಳುವ ಪ್ರಕಾರ ಐತಿಹಾಸಿಕವಾದ ಈ ಮಸೂದೆಯ ಬಗ್ಗೆ ಹೆಚ್ಚಿನ ಸಲಹೆ ಕೊಡುವಂತೆ ಮಾಡಿದರೆ ಇನ್ನೂ ಹೆಚ್ಚಿನ ಪ್ರಯೋಜನವಾಗಬಹುದೆಂದು ನಂಬುತ್ತೇನೆ. ನಾನು ಇನ್ನು ಹೆಚ್ಚು ಮಾತನಾಡುವುದಕ್ಕೆ ಹೋಗದೆ ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿದರೆ ಹೆಚ್ಚಿನ ಪ್ರಯೋಜನಕಾರಿಯಾಗುತ್ತದೆಂದು ಸೂಚಿಸಿ ಈ ಮಸೂದೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

SRI B. BHASKAR SHETTY.—Sir, I move :

"That the debate on the Motion for consideration of Karnataka Command Areas Development Bill, 1979 be adjourned and the other two Bills put in the Agenda may be taken up"

Mr. CHAIRMAN : Motion moved.

"That the debate on the Motion for consideration of Karnataka Command Areas Development Bill, 1979 be adjourned and the other two Bills put in the Agenda may be taken up"

The Motion was adopted.

MR. CHAIRMAN.—We will take up other Bills now.

(Karnataka Pawn Brokers (Amendment)Bill, 1979
Motion to Consider

SRI V. M. KUSHNOOR. (Minister for Coperation.). – I move :

"That the Karnataka Pawn Brokers (Amendment) Bill, 1979 be taken into consideration".

The question was proposed

This is a simple amendment which the Govt. has brought some time back. It has been brought to the notice of the Govt. that pawn brokers are hypothecating the same articles in the Nationalised Banks and other Scheduled Banks and again they are advancing loans at higher rate of interest to the poor people Therefore, Government thought that there must be some amendment to Sec. 16. Earlier there was no provision to control them from doing such things. Therefore, we thought it proper to bring this amendment replacing